# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

**ಸಂಖ್ಯೆ:ಕರಾಮುವಿ/ಪವಿ/5.1/ಯುಜಿ.ಪಿಜಿ/ತೆ.ಪು.ಪ/138/2020-21.** **ದಿನಾಂಕ:-11-11-2020**

## ಅಧಿಸೂಚನೆ

**ವಿಷಯ:- 2019-20ನೇ ಶೈಕ್ಷಣಿಕ ಸಾಲಿನಲ್ಲಿ (ಜನವರಿ ಆವೃತ್ತಿ)ಪ್ರವೇಶಾತಿ ಪಡೆದ ಸ್ನಾತಕ/ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಎಂ.ಹೆಚ್.ಆರ್.ಡಿ- ಯುಜಿಸಿ ಹಾಗೂ ರಾಜ್ಯ ಸರ್ಕಾರಗಳ ನಿರ್ದೇಶನದ ಅನ್ವಯ ನಡೆಸಲಾಗುವ ಪರೀಕ್ಷೆಗೆ ಪರೀಕ್ಷಾ ಶುಲ್ಕ ಪಾವತಿಸುವ ಬಗೆಗೆ.**

**ಉಲ್ಲೇಖ:- ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10-11-2020.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2019-20ನೇ ಶೈಕಣಿಕ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳನ್ನು ಮುಂದಿನ ಶೈಕ್ಷಣಿಕ ಸಾಲಿಗೆ ಉತ್ತೀರ್ಣಗೊಳಿಸಲು ಪರೀಕ್ಷೆಗಳನ್ನು ನಡೆಸುವ ಸಂಬಂಧ ಸರ್ಕಾರ ಮತ್ತು ಯು.ಜಿ.ಸಿ.ಯು ಅನೇಕ ನಿರ್ದೇಶನ ಮತ್ತು ಮಾರ್ಗಸೂಚಿಗಳನ್ನು ನೀಡಿರುತ್ತದೆ. ಅದರಂತೆ ವಿಶ್ವವಿದ್ಯಾನಿಲಯವು ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಗಮನದಲ್ಲಿರಿಸಿಕೊಂಡು, ವಿಶ್ವವಿದ್ಯಾನಿಲಯದ ಪರೀಕ್ಷಾ ಪ್ರಕ್ರಿಯೆಗಳ ಘನತೆಗೆ ಅನುಗುಣವಾಗಿ ಪರೀಕ್ಷೆ ನಡೆಸುವ ಸಲುವಾಗಿ 2019-20ನೇ ಸಾಲಿನ (ಜನವರಿ ಆವೃತ್ತಿ) ಪ್ರಥಮ ವರ್ಷದ ಸ್ನಾತಕ/ಸ್ನಾತಕೋತ್ತರ ಪದವಿಗಳ, ಎಂ.ಎಸ್ಸಿ ಪ್ರಥಮ ಸೆಮಿಸ್ಟರ್ ಹಾಗೂ ಎಂ.ಬಿ.ಎ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ **"ತೆರೆದ ಪುಸ್ತಕ ಪರೀಕ್ಷೆ" (Open Book Exam)** ನಡೆಸಲು ತೀರ್ಮಾನಿಸಿದೆ. ಈ ಸಂಬಂಧ ಈ ಕೆಳಕಂಡ ಪದವಿ ವಿದ್ಯಾರ್ಥಿಗಳು ಮಾತ್ರ ಪರೀಕ್ಷಾ ಶುಲ್ಕ ಪಾವತಿಸಲು ತಿಳಿಸಲಾಗಿದೆ.

- **2019-20ನೇ** ಶೈಕ್ಷಣಿಕ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಬಿ.ಎ/ಬಿ.ಕಾಂ ಪದವಿಯ ವಿದ್ಯಾರ್ಥಿಗಳು.
- **2019-20ನೇ** ಶೈಕ್ಷಣಿಕ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಎಂ.ಎ/ಎಂ.ಕಾಂ ಪದವಿಯ ವಿದ್ಯಾರ್ಥಿಗಳು.
- **2019-20ನೇ** ಶೈಕ್ಷಣಿಕ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರಥಮ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ಎಂ.ಎಸ್ಸಿ ಪದವಿಯ ವಿದ್ಯಾರ್ಥಿಗಳು.
- **2019-20ನೇ** ಶೈಕ್ಷಣಿಕ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದ ಎಂ.ಬಿ.ಎ ಪದವಿಯ ವಿದ್ಯಾರ್ಥಿಗಳು.

ಈ ಸಂಬಂಧ ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿದ್ದು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.inನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ **(Online)** ಮೂಲಕವೇ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್‌ಲೈನ್ ಸಹಾಯವಾಣಿ ಸಂಖ್ಯೆ **8800335638** ಯನ್ನು ಸಂಪರ್ಕಿಸುವುದು.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸುವ ಪ್ರಾರಂಭದ ದಿನಾಂಕ: | 17-11-2020 |
| ದಂಡ ಶುಲ್ಕವಿಲ್ಲದೆ ಪಾವತಿಗೆ ಕಡೆ ದಿನಾಂಕ: | 17-12-2020 |
| ರೂ.200/- ದಂಡ ಶುಲ್ಕದೊಂದಿಗೆ ಪಾವತಿಗೆ ಕಡೆ ದಿನಾಂಕ: | 28-12-2020 |

**ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕಗಳ ವಿವರಗಳು**

| ಕ್ರಮ ಸಂಖ್ಯೆ | ಪದವಿಗಳು | ಪೂರ್ಣಪರೀಕ್ಷೆಯ ಶುಲ್ಕದ ವಿವರ | ಪಾವತಿಸಬೇಕಾಗಿರುವ ಅರ್ಧದಷ್ಟು (50%) ಶುಲ್ಕದ ವಿವರ |
|---|---|---|---|
| 01 | ಬಿ.ಎ/ಬಿ.ಕಾಂ | ರೂ. 850/- | ರೂ. 425/- |
| 02 | ಎಂ.ಎ/ಎಂ.ಕಾಂ | ರೂ. 1,200/- | ರೂ. 600/- |
| 03 | ಎಂ.ಎಸ್ಸಿ ಪದವಿಗಳು | ರೂ. 2,000/- | ರೂ. 1,000/- |
| 04 | ಎಂ.ಬಿ.ಎ | ರೂ. 1,200/- | ರೂ. 600/- |

**ವಿದ್ಯಾರ್ಥಿಗಳ ಗಮನಕ್ಕಾಗಿ**

1. **"ತೆರೆದ ಪುಸ್ತಕ ಪರೀಕ್ಷೆ"ಯು (Open Book Exam)** ವಿದ್ಯಾರ್ಥಿಗಳು ನಿಗದಿತ ಕಾಲಾವಧಿಯಲ್ಲಿ ಅವರು ಇರುವ ಸ್ಥಳಗಳಲ್ಲಿ ಪರೀಕ್ಷೆಗಳನ್ನು ಬರೆಯುವ ಸ್ವರೂಪವನ್ನು ಹೊಂದಿರುತ್ತದೆ ಹಾಗೂ ನಿಗದಿತ ಕಾಲಾವಧಿಯೊಳಗೆ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕಾಗಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಕೆಗೊಳ್ಳುವ ವ್ಯಾಪ್ತಿಯನ್ನು ಹೊಂದಿರುತ್ತದೆ.

2. **"ತೆರೆದ ಪುಸ್ತಕ ಪರೀಕ್ಷೆ"**ಯು ವಿಶೇಷ ಸಂದರ್ಭವೆಂದು ಪರಿಗಣನೆಗೊಳ್ಳುತ್ತದೆ ಹಾಗೂ ಇದು ಒಂದು ಬಾರಿಯ ಅವಕಾಶವಾಗಿರುತ್ತದೆ. **ಇದರಲ್ಲಿ ಮರು ಮೌಲ್ಯಮಾಪನಕ್ಕೆ ಹಾಗೂ ಉತ್ತರ ಪತ್ರಿಕೆಯ ಛಾಯಪ್ರತಿ ಪಡೆಯಲು ಅವಕಾಶವಿರುವುದಿಲ್ಲ**. 2019-20ನೇ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ, 2019-20ನೇ ಸಾಲಿನ ಪರೀಕ್ಷೆಗೆ ಮಾತ್ರ ಈ ಪರೀಕ್ಷಾ ವಿಧಾನ ಅನ್ವಯವಾಗುತ್ತದೆ. ಸದರಿ ಪರೀಕ್ಷೆಗೆ ಗೈರುಹಾಜರಾದಲ್ಲಿ ಅಥವಾ ಅನುತ್ತೀರ್ಣರಾದಲ್ಲಿ ಅಂತಹ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ನಿಯಮಾನುಸಾರ ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವನ್ನು ಕಲ್ಪಿಸಲಾಗುತ್ತದೆ.
3. ವಿದ್ಯಾರ್ಥಿಗಳು ಈಗಾಗಲೇ ನಿಗದಿಪಡಿಸಲಾಗಿರುವ ಶುಲ್ಕದ ಅರ್ಧದಷ್ಟು (50%) ಶುಲ್ಕವನ್ನು ವಿಶ್ವವಿದ್ಯಾನಿಲಯದ ನಿಗದಿತ ಖಾತೆಗೆ ಆನ್‌ಲೈನ್ ಮುಖಾಂತರ ಪಾವತಿಸಬೇಕು.
4. ವಿಶ್ವವಿದ್ಯಾನಿಲಯದಲ್ಲಿ 2019-20ನೇ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರಥಮ ವರ್ಷದ ಸ್ನಾತಕ/ಸ್ನಾತಕೋತ್ತರ ಪದವಿಗಳ, ಎಂ.ಎಸ್ಸಿ ಪ್ರಥಮ ಸೆಮಿಸ್ಟರ್ ಹಾಗೂ ಎಂ.ಬಿ.ಎ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ **"ತೆರೆದ ಪುಸ್ತಕ ಪರೀಕ್ಷೆ" (Open Book Exam)**ಗಳಿಗೆ, ಆನ್‌ಲೈನ್ ಮುಖಾಂತರ ಪ್ರಶ್ನೆ ಪತ್ರಿಕೆಗಳನ್ನು ಪ್ರಕಟಪಡಿಸಿ, ಕಾಲಮಿತಿಯನ್ನು ನಿಗದಿಪಡಿಸಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ.
5. **"ತೆರೆದ ಪುಸ್ತಕ ಪರೀಕ್ಷೆ"**ಯ ಉತ್ತರ ಪತ್ರಿಕೆಯ ಮೊದಲ ಪುಟವನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ವಿದ್ಯಾರ್ಥಿಗಳ ಹೆಸರು, ನೋಂದಣಿ ಸಂಖ್ಯೆ, ವಿಷಯ, ವರ್ಷ ಮುಂತಾದ ವಿವರಗಳ ಕಾಲಂಗಳನ್ನು ಒಳಗೊಂಡಿರುತ್ತದೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಉತ್ತರ ಪತ್ರಿಕೆಯ ಮೊದಲ ಪುಟದ ಕಾಲಂಗಳನ್ನು ಭರ್ತಿ ಮಾಡಿ ಪ್ರತೀ ಉತ್ತರ ಪತ್ರಿಕೆಗಳಿಗೆ ಪ್ರತೇಕವಾಗಿ ಮೊದಲ ಪುಟವನ್ನು ಲಗತ್ತಿಸಿ ಸಲ್ಲಿಸಬೇಕು.
6. **"ತೆರೆದ ಪುಸ್ತಕ ಪರೀಕ್ಷೆ"**ಯ ಪ್ರಶ್ನೆ ಪತ್ರಿಕೆಗಳು ಆನ್‌ಲೈನ್‌ನಲ್ಲಿ ಬಿಡುಗಡೆಗೊಂಡು ಹತ್ತು ದಿವಸಗಳ ಒಳಗಾಗಿ ವಿದ್ಯಾರ್ಥಿಗಳು, ಪ್ರಶ್ನೆಪತ್ರಿಕೆಗಳಲ್ಲಿ ನೀಡಲಾಗಿರುವ ಸೂಚನೆಗಳಿಗನುಸಾರವಾಗಿ **A4** ಅಳತೆಯ ಬಿಳಿಯ ಹಾಳೆಗಳಲ್ಲಿ ಉತ್ತರಗಳನ್ನು ಕೈಬರಹದಲ್ಲಿ ಬರೆದು, ಕಡ್ಡಾಯವಾಗಿ ಎಲ್ಲಾ ಉತ್ತರ ಪತ್ರಿಕೆಗಳನ್ನು ಒಂದೇ ಲಕೋಟೆಯಲ್ಲಿ ಲಗತ್ತಿಸಿ ಲಕೋಟೆಯ ಮೇಲೆ ಹೆಸರು, ನೋಂದಣಿ ಸಂಖ್ಯೆ ಹಾಗೂ ಪದವಿಯ ಹೆಸರನ್ನು ಸ್ಪಷ್ಟವಾಗಿ ನಮೂದಿಸಿ ಸರ್ಕಾರಿ ಅಂಚೆಯ ಸ್ಪೀಡ್ ಪೋಸ್ಟ್ / ರಿಜಿಸ್ಟರ್ಡ್ ಪೋಸ್ಟ್ ಮುಖಾಂತರ **ಕುಲಸಚಿವರು(ಪರೀಕ್ಷಾಂಗ) ಕರಾಮುವಿ ಮೈಸೂರು ರವರಿಗೆ ರವಾನಿಸಬೇಕು**, ಕಾಲಾವಧಿ ಮುಗಿದ ನಂತರ ಬಂದ ಉತ್ತರಪತ್ರಿಕೆಗಳನ್ನು ಯಾವುದೇ ಕಾರಣಗಳಿಗೂ ಸ್ವೀಕರಿಸಲಾಗುವುದಿಲ್ಲ ಹಾಗೂ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
7. **"ತೆರೆದ ಪುಸ್ತಕ ಪರೀಕ್ಷೆ"**ಯು ಪ್ರಾಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, **ಕೋವಿಡ್-19** ಸಾಂಕ್ರಾಮಿಕ ರೋಗದ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು, ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು, ಎಲ್ಲಾ ಕಾರ್ಯಕ್ರಮಗಳ ಪ್ರಾಯೋಗಿಕ ಪರೀಕ್ಷೆಗಳನ್ನು, ಆಯಾ ವಿಷಯಗಳ ವಿದ್ಯಾರ್ಥಿಗಳನ್ನು ತಂಡಗಳಾಗಿ ಬೇರ್ಪಡಿಸಿ (Batch-wise), ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯಲ್ಲಿ ನಡೆಸಲಾಗುವುದು.
8. **"ತೆರೆದ ಪುಸ್ತಕ ಪರೀಕ್ಷೆ"**ಯ ಮುಗಿದ ನಂತರ ಫಲಿತಾಂಶಕ್ಕಾಗಿ ಕಾಯದೆ 2019-20ನೇ ಸಾಲಿನಲ್ಲಿ ಪ್ರಥಮ ವರ್ಷದ ಸ್ನಾತಕ/ಸ್ನಾತಕೋತ್ತರ ಪದವಿಗಳ, ಎಂ.ಎಸ್ಸಿ ಪ್ರಥಮ ಸೆಮಿಸ್ಟರ್ ಹಾಗೂ ಎಂ.ಬಿ.ಎ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರವೇಶಾತಿ ಪಡೆದಿರುವ ಎಲ್ಲಾ ವಿದ್ಯಾರ್ಥಿಗಳನ್ನು ಮುಂದಿನ ಶೈಕ್ಷಣಿಕ ಸಾಲಿಗೆ ಪ್ರವೇಶಾತಿ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.
9. ಎಂ.ಎಸ್ಸಿ ಪದವಿಗಳ ಪ್ರಾಯೋಗಿಕ ಪರೀಕ್ಷೆಗಳ ಬಗೆಗೆ ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರನ್ನು ಸಂಪರ್ಕಿಸುವುದು.

ಕುಲಸಚಿವರು(ಪರೀಕ್ಷಾಂಗ)

ಪ್ರತಿ:

1. ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯ ಅಧಿಕಾರಿಗಳು ಕರಾಮುವಿ, ಮೈಸೂರು.
2. ಮಾನ್ಯ ಕುಲಸಚಿವರ ಆಪ್ತಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ಡೀನ್(ಶೈಕ್ಷಣಿಕ),ಕರಾಮುವಿ,ಮೈಸೂರು.
5. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
6. ಮುಖ್ಯಸ್ಥರು ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
7. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು, ಕರಾಮುವಿ.
8. ನೋಡೆಲ್ ಅಧಿಕಾರಿಗಳು, ವೆಬ್‌ಸೈಟ್ ನಿರ್ವಹಣೆ, ಕರಾಮುವಿ. ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸುವಂತೆ ಕ್ರಮವಹಿಸುವುದು.
9. ಉಪಕುಲಸಚಿವ/ಸಹಾಯಕ ಕುಲಸಚಿವರು/ಅಧೀಕ್ಷಕರು, ಕರಾಮುವಿ, ಮೈಸೂರು.
10. ಕಛೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.